INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -6, March-April, 2022,
PageNo,08-17
Peer Reviewed Journal, Referred Journal

# ಬೆಂಗಳೂರು ಮಹಾನಗರದಲ್ಲಿನ ವಸ್ತು ಸಂಗ್ರಹಾಲಯಗಳ ಒಂದು ಚಾರಿತ್ರಿಕ ಅಧ್ಯಯನ

**ಮಹೇಶ್.ಎನ್.**[1]

ಜಗತ್ತಿನಲ್ಲಿ ಗತಿಸಿಹೋಗಿರುವಂತಹ ಸಂಗತಿಗಳು ಮತ್ತು ಗತವೈಭವವನ್ನು ಅರಿಯಲು ಇಂದಿಗೂ ಕೂಡ ಸಾಕ್ಷೀಭೂತವಾಗಿರುವವು ಮಾತ್ರ ವಸ್ತುಸಂಗ್ರಹಾಲಯಗಳೇ ಆಗಿರುತ್ತವೆ. ಈ ವಸ್ತುಸಂಗ್ರಹಾಲಯವು ಸಾಂಸ್ಕೃತಿಕ, ವೈಜ್ಞಾನಿಕ, ಚಾರಿತ್ರಿಕ ಮತ್ತು ಅಲಂಕಾರಿಕ ಮೌಲ್ಯವುಳ್ಳ ವಸ್ತುಗಳನ್ನು ಸಂಗ್ರಹಿಸುವ ತಾಣ, ರಕ್ಷಿಸುವ, ಅಧ್ಯಯನ ಮಾಡುವ, ಪ್ರದರ್ಶಿಸುವ ಮತ್ತು ಹೆಚ್ಚಿನದಾಗಿಯೇ ಶೈಕ್ಷಣಿಕ ಉಪಯೋಗಕ್ಕೆ ಒದಗಿಸುವ ಒಂದು ಸಂಸ್ಥೆಯೇ ಆಗಿರುತ್ತದೆ. ವಸ್ತುಗಳನ್ನು ಸಂಗ್ರಹಿಸುವ ಮಾನವನ ಆಸಕ್ತಿಯೂ  ಪ್ರಾಚೀನತೆಯಿಂದಲೇ ಕೂಡಿರುತ್ತದೆ. ಈ ನೆಲೆ ಮತ್ತು ಹಿನ್ನೆಲೆಯೊಳಗೆ ಕರ್ನಾಟಕ ರಾಜ್ಯದ ರಾಜಧಾನಿಯಾಗಿರುವಂತಹ ಬೆಂಗಳೂರು ನಗರದಲ್ಲಿರುವ ಪ್ರಧಾನ ವಸ್ತುಸಂಗ್ರಹಾಲಯಗಳನ್ನು ಕುರಿತು ಅವುಗಳ ಚಾರಿತ್ರಿಕ ಅಂಶಗಳನ್ನು ಪ್ರಸ್ತುತ ಲೇಖನದಲ್ಲಿ ಹೊರಜಗತ್ತಿಗೆ ಈ ಮೂಲಕ ತರಲಾಗಿದೆ. ಕರ್ನಾಟಕ ರಾಜ್ಯದಲ್ಲಿನ ವಸ್ತುಸಂಗ್ರಹಾಲಯಗಳನ್ನು ತಳಸ್ಪರ್ಶಿಯಾಗಿ ಅಧ್ಯಯನ ಮಾಡಿದಾಗ; ಬೆಂಗಳೂರು ನಗರ ಪ್ರದೇಶದಲ್ಲಿರುವಂತಹ ಪ್ರಮುಖವಾದ ವಸ್ತು ಸಂಗ್ರಹಾಲಯಗಳು ಹೆಚ್ಚು ಪ್ರಚಲಿತವಾಗಿರುತ್ತವೆ. ಅವುಗಳೆಂದರೆ; ಸರ್ಕಾರಿ ವಸ್ತುಸಂಗ್ರಹಾಲಯ, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ, ಎಚ್‌ಎಎಲ್ ಹೆರಿಟೇಜ್ ಸೆಂಟರ್ ಮತ್ತು ಏರೋಸ್ಪೇಸ್ ಮ್ಯೂಸಿಯಂ, ನಿಮ್ಹಾನ್ಸ್ ಮೆದುಳು ಸಂಗ್ರಹಾಲಯ, ಕೆಂಪೇಗೌಡ ವಸ್ತುಸಂಗ್ರಹಾಲಯ, ಕರ್ನಾಟಕ ಜಾನಪದ ವಸ್ತುಸಂಗ್ರಹಾಲಯ, ಮದ್ರಾಸ್ ಸ್ಯಾಪ್ಪರ್ಸ್ ಮ್ಯೂಸಿಯಂ, ಲಾ ಮ್ಯೂಸಿಯಂ, ಅಂಚೆಚೀಟಿ ಸಂಗ್ರಹಾಲಯ, ಗಾಂಧೀ ಭವನ ವಸ್ತುಸಂಗ್ರಹಾಲಯ, ಲೆಜೆಂಡ್ಸ್ ಮೋಟಾರ್ ಸೈಕಲ್ ಮ್ಯೂಸಿಯಂ ಮತ್ತು ಜವಾಹರಲಾಲ್ ನೆಹರು ತಾರಾಲಯ. ಇವುಗಳಲ್ಲಿ ಕೆಲವುಗಳ ಚಾರಿತ್ರಿಕ ನೋಟವನ್ನು ಮಾತ್ರ ಈ ಮುಂದಿನಂತೆ ಚರ್ಚಿಸಲಾಗಿರುತ್ತದೆ.

ಬೆಂಗಳೂರು ನಗರ ಕೇಂದ್ರ ಪ್ರದೇಶದಲ್ಲಿರುವಂತಹ **ಸರ್ಕಾರಿ ವಸ್ತು ಸಂಗ್ರಹಾಲಯವೂ** ಭಾರತ ದೇಶದಲ್ಲಿ ಪ್ರಾರಂಭವಾದ ವಸ್ತು ಸಂಗ್ರಹಾಲಯಗಳಲ್ಲಿ ಆರನೆಯದ್ದಾಗಿರುತ್ತದೆ ಮತ್ತು ದಕ್ಷಿಣ ಭಾರತದಲ್ಲಿ ಎರಡನೇಯ ಅತ್ಯಂತ ಹಳೆಯ ವಸ್ತುಸಂಗ್ರಹಾಲಯವೇ ಆಗಿದೆ ಎಂಬುದನ್ನು ಕೂಡ

1. **ಸಂಶೋಧಕರು**, ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

ಗುರುತಿಸಬಹುದು. ಸರ್ಕಾರಿ ವಸ್ತು ಸಂಗ್ರಹಾಲಯವನ್ನು 1865ರಲ್ಲಿ ಡಾ.ಎಡ್ವರ್ಡ್ ಗ್ರೀನ್ ಬೆಲ್‌ಫೂರ್ ಅವರು ಸ್ಥಾಪಿಸಿದರು. ಇವರು ಮೂಲತಃ ವೃತ್ತಿಯಿಂದ ವೈದ್ಯರಾಗಿದ್ದು, ಪ್ರವೃತ್ತಿಯಿಂದ ಘನ ಸಂಶೋಧಕರು. ಆ ಕಾರಣವಾಗಿಯೇ ಇವರು ನಾನಾ ಕಡೆ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಿದವರು. ಈ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಐತಿಹಾಸಿಕವಾಗಿ ಪ್ರಾಮುಖ್ಯತೆಯ ಹಲವಾರು ಪುರಾತತ್ತ್ವ ಮತ್ತು ಭೌಗೋಳಿಕ ಕಲಾಕೃತಿಗಳಿಗೆ ನೆಲೆಯಾಗಿದೆ. ಇಲ್ಲಿ ಮೊದಲಿನ ಕನ್ನಡ ಶಾಸನವಾದಂತಹ ಹಲ್ಮಿಡಿ ಶಾಸನವನ್ನು ಸಂಗ್ರಹಿಸಿ ಸುರಕ್ಷಿತವಾಗಿಡಲಾಗಿದೆ. 1865ರಲ್ಲಿ ಸ್ಥಾಪಿತಗೊಂಡಿರುವಂತಹ ಈ ವಸ್ತುಸಂಗ್ರಹಾಲಯವು ಎರಡು ಮಹಡಿಗಳನ್ನು ಮತ್ತು ಹದಿನೆಂಟು ಪ್ರದರ್ಶನ ಕೊಠಡಿಗಳನ್ನು ಅಥವಾ ಗ್ಯಾಲರಿಗಳನ್ನು ಹೊಂದಿರುತ್ತದೆ. ಇದು ದೇಶ ವಿದೇಶದಲ್ಲಿನ ಪ್ರವಾಸಿಗರಿಗೆ ಭಾರತೀಯ ಸಂದರ್ಭದಲ್ಲಿನ ಪ್ರಾಚೀನ ಇತಿಹಾಸ, ತಂತ್ರಜ್ಞಾನ ಮತ್ತು ಸಂಪ್ರದಾಯಗಳ ಪರಿಚಯವನ್ನು ತಳಮೂಲವಾಗಿಯೇ ಮಾಡಿಕೊಡುತ್ತದೆ ಎಂದೇ ಹೇಳಬಹುದು.

ಬೆಂಗಳೂರು ನಗರ ಪ್ರದೇಶದಲ್ಲಿರುವಂತಹ ಈ ಸರ್ಕಾರಿ ವಸ್ತುಸಂಗ್ರಹಾಲಯವು ಈ ಕೆಳಕಂಡ ಪ್ರಮುಖ ಆಕರ್ಷಣೆಗಳಿಗೆ ಕಾರಣವಾಗಿರುತ್ತದೆ. ಆ ಆಕರ್ಷಣೆಗಳೆಂದರೆ; ವೆಂಕಟಪ್ಪ ಚಿತ್ರಶಾಲೆಯಲ್ಲಿರುವಂತಹ 600 ವರ್ಣಚಿತ್ರಗಳು, ಹೊಯ್ಸಳ, ನೊಳಂಬ ಮತ್ತು ಗಾಂಧಾರ ಅವಧಿಗಳ ಶಿಲ್ಪಗಳು, ಚಂದ್ರವಳ್ಳಿ, ಮೊಹೆಂಜೋದಾರೋ, ಹಂಪಿ ಮತ್ತು ಹಳೆಬೀಡುಗಳಲ್ಲಿ ಉತ್ಖನನದ ಸಮಯದಲ್ಲಿ ಪಡೆದಿರುವ ಕಲಾಕೃತಿಗಳು, ಮಥುರಾ – ಶ್ರೀಕೃಷ್ಣನ ಜನ್ಮಸ್ಥಳದಿಂದ ತಂದಿರುವಂತಹ ಮಣ್ಣಿನ ಟೆರಾಕೋಟಾದ ಕಲಾಕೃತಿಗಳು, ಕೊಡಗಿನ ಯೋಧರು ಬಳಸುವ ಶಸ್ತ್ರಾಸ್ತ್ರಗಳು, ಕ್ರಿ.ಶ.890ರ ಬೆಸ್ನಗರ್ ಶಾಸನ, ಕ್ರಿ.ಶ 450ರ ಹಲ್ಮಿಡಿ ಶಾಸನ ಮತ್ತು 949ರ ಆತಕೂರ್ ಶಾಸನ ಸೇರಿದಂತೆ ಪ್ರಾಚೀನ ಶಾಸನಗಳ ಸಂಗ್ರಹ, ಪುರಾತನ ಕಾಲದ ಸಂಗೀತ ವಾದ್ಯಗಳು ಮತ್ತು ಟಿಪ್ಪೂ ಸುಲ್ತಾನ್‌ನ ಕೋಟೆ, ಶ್ರೀರಂಗಪಟ್ಟಣ ಇತ್ಯಾದಿಗಳ ಸಣ್ಣ ಗಾತ್ರದ ಮಾದರಿಯ ಸಂಗ್ರಹವಾಗಿರುತ್ತದೆ.

ಬೆಂಗಳೂರು ನಗರ ಪ್ರದೇಶದಲ್ಲಿರುವ ಮತ್ತೊಂದು ವಸ್ತುಸಂಗ್ರಹಾಲಯವೇ **ವಿಶ್ವೇಶ್ವರಯ್ಯ ಕೈಗಾರಿಕೆ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ (ವಿ.ಐ.ಟಿ.ಎಂ)**. ಇದು ಕರ್ನಾಟಕದ ಪ್ರಖ್ಯಾತ ಇಂಜಿನಿಯರ್‌ರೂ ಮೈಸೂರಿನ ದಿವಾನರು ನವ ಮೈಸೂರು ಶಿಲ್ಪಿಗಳೂ ಎನಿಸಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅವರ ನೆನಪಿನಲ್ಲಿ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯವನ್ನು 1965ರಲ್ಲಿ ಸ್ಥಾಪಿಸಲಾಯಿತು. ಇದು ಸರ್ಕಾರಿ ವಸ್ತು ಸಂಗ್ರಹಾಲಯದ ಬಲ ಪಾರ್ಶ್ವಕ್ಕೆ ಇದೆ. ನವದೆಹಲಿ 'ದಿ ನ್ಯಾಷನಲ್ ಕೌನ್ಸಿಲ್ ಆಫ್ ಸೈನ್ಸ್ ಮ್ಯೂಸಿಯಮ್ಸ್' (ಎನ್.ಸಿ.ಎಸ್.ಎಂ.) ವಿಜ್ಞಾನ ವಸ್ತು ಸಂಗ್ರಹಾಲಯಗಳ/ ವಿಜ್ಞಾನ ಕೇಂದ್ರಗಳ ಅತ್ಯಂತ ದೊಡ್ಡ ನೆಟ್‌ವರ್ಕ್, 1978ರಲ್ಲಿ ಸ್ಥಾಪನೆಗೊಂಡಿತು. ಬೆಂಗಳೂರಿನ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ ಎನ್.ಸಿ.ಎಸ್.ಎಂ.ನ

ವಿಭಾಗವಾಗಿದೆ. ಇದರ ಉದ್ದೇಶ ಎಲ್ಲಾ ವಿಧದ ಪ್ರಯೋಗಗಳ ಮೂಲಕ ವಿಜ್ಞಾನವನ್ನು ತಿಳಿಸಿ ಕೊಡುವುದೇ ಆಗಿದೆ.

ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯದಲ್ಲಿನ ಪ್ರಧಾನ ಗ್ಯಾಲರಿಗಳೆಂದರೆ; ಜನಪ್ರಿಯ ವಿಜ್ಞಾನ ಗ್ಯಾಲರಿ, ಕಿಂಬೆ ಕಾಗದ ಲೋಹಗಳ ಗ್ಯಾಲರಿ, ಮಕ್ಕಳ ವಿಜ್ಞಾನ ಗ್ಯಾಲರಿ, ಎಲೆಕ್ಟ್ರಾನಿಕ್ ಟೆಕ್ನಾಲಜಿ ಗ್ಯಾಲರಿ, ಎಂಜಿನ್ ಹಾಲ್ ಬ್ಯಾಲರಿ. ಈ ಸಂಗ್ರಹಾಲಯ ವಿಜ್ಞಾನದ ಪ್ರಗತಿಯ ವಿವಿಧ ಹಂತಗಳ ಸ್ವರೂಪವನ್ನು ನೋಡುವ, ತಿಳಿಯುವ ಹಾಗೂ ಸ್ಪರ್ಶಿಸುವ ಅಪರೂಪದ ಅವಕಾಶವನ್ನು ಜನರಿಗೆ ಒದಗಿಸಿಕೊಡಲಾಗಿದೆ ಎಂದು ಹೇಳಬಹುದು. ಹಾಗೆಯೇ, ಆಸಕ್ತ ವಿದ್ಯಾರ್ಥಿಗಳಿಗಂತೂ ಇದು ತುಂಬು ಕೂತೂಹಲವನ್ನೇ ಉಂಟುಮಾಡುತ್ತದೆ. ಯಾರ ಸಹಾಯವೂ ಇಲ್ಲದೆ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಸಂಕ್ಷಿಪ್ತವಾಗಿ ಕೊಡಲಾದ ವಿವರಗಳೊಂದಿಗೆ ಸಮಸ್ತ ವೀಕ್ಷಕರು ಕೂಡ ತಿಳಿಯಬಹುದು. ಹಲವು ಹತ್ತು ವಿಶ್ವವಿಖ್ಯಾತ ವಿಜ್ಞಾನಿಗಳ ಭಾವಚಿತ್ರಗಳೊಂದಿಗೆ ಅವರ ಕಿರುಪರಿಚಯವನ್ನು ಮಾಡಿರುವ ವ್ಯವಸ್ಥೆ ಇಲ್ಲಿ ಇದೆ. ಶಕ್ತಿಯ ವಿವಿಧ ಬಗೆಗಳನ್ನು ಬಳಸಿಕೊಂಡ ರೀತಿ ಮತ್ತು ಅದರ ಬೆಳವಣಿಗೆಗಳನ್ನು ತೋರಿಸುವ ಚಲನಶೀಲ ಮಾದರಿಗಳು, ಹಲವಾರು ಯಂತ್ರಗಳ ವಿವಿಧ ಸ್ವರೂಪಗಳು, ಬಗೆ ಬಗೆಯ ಗಡಿಯಾರಗಳು, ಸ್ವಯಂ ಚಾಲಿತ ಆಟೋಮೊಬೈಲ್ ಯಂತ್ರಗಳ ಕಾರ್ಯವಿಧಾನವನ್ನು ಹೆಚ್ಚಿನ ರೀತಿಯಲ್ಲಿಯೇ ಪರಿಚಯಿಸಲಾಗಿದೆ. ಯಂತ್ರಗಳ ತಯಾರಿಕೆಗೆ ಕಾರಣರಾದ ತಂತ್ರಜ್ಞರ – ವಿಜ್ಞಾನಿಗಳ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ. ಸಣ್ಣ ಹಾಗೂ ಸೂಕ್ಷ್ಮ ಯಂತ್ರಗಳು, ಬೀಗಗಳು, ಹೊಲಿಗೆಯಂತ್ರದ ವಿಧಾನ. ಹೀಗೆ ಇನ್ನೂ ಮೊದಲಾದವುಗಳನ್ನು ಆಸಕ್ತಿ ಮೂಡಿಸುವಂತೆ ಸರಳವಾಗಿ ತಿಳಿಸಿ ಕೊಡಲಾಗಿದೆ.

ಮಕ್ಕಳಿಗೆ ಜ್ಞಾನ ವಿಕಾಸ ಮಾಡಿಕೊಳ್ಳಲು ಈ ಮ್ಯೂಸಿಯಂ ಸರಿಯಾದ ತಾಣವೇ ಆಗಿರುತ್ತದೆ. ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಇಲ್ಲಿ ಹೆಚ್ಚಿನದಾಗಿಯೇ ಕಾಣಬಹುದು. ಜೀವ ವಿಜ್ಞಾನ ವಿಭಾಗದಲ್ಲಿ ಆಕರ್ಷಕ ಬಣ್ಣ ಬಣ್ಣದ ಮೀನುಗಳು, ಬಸವನಹುಳು, ಏಡಿಗಳು ನೋಡಿ ಅವುಗಳ ಚಲನವಲನಗಳನ್ನು ಕೂಡ ತಿಳಿಯಬಹುದು. ಭೌತವಿಜ್ಞಾನ ವಿಭಾಗದಲ್ಲಿ ಸರಳ ಪ್ರಯೋಗಗಳ ಮೂಲಕ ತಿಳಿಸಿಕೊಡುವ ಮಾಹಿತಿಗಳವೆ ವಿದ್ಯಾರ್ಥಿಗಳಿಗೆ ರೋಚಕ. ಎಲೆಕ್ಟ್ರಾನಿಕ್ ಟೆಕ್ನಾಲಜಿ ವಿಭಾಗದಲ್ಲಿ ವಿದ್ಯುತ್ ಹಾಗೂ ಎಲೆಕ್ಟ್ರಾನಿಕ್ ಸಾಧನಗಳು ಹಾಗೂ ಅವುಗಳ ಬಳಕೆಯ ವ್ಯಾಪಕತೆಯನ್ನು ಕಾಣಬಹುದು. ದೂರವಾಣಿ ಇಂದು ಅತ್ಯಂತ ಸರಳವಾಗಿದೆ. ಸಣ್ಣ ಮೊಬೈಲ್‌ನಿಂದ ಸಂವಹನ ಸುಲಭವಾಗಿದೆ. ಆದರೆ ಹಿಂದೆ ಬಳಕೆಯಲ್ಲಿದ್ದ ಹಳೆಯ ಟೆಲಿಫೋನ್ ಮಾದರಿಗಳು ಹಾಗೂ ಸಂಪರ್ಕ ಜಾಲ ಕಾರ್ಯವಿಧಾನವನ್ನು ತಿಳಿಯಲು ಈ ಮ್ಯೂಸಿಯಂ ಮುಕ್ತವಾದಂತಹ ಅವಕಾಶವನ್ನೇ ಕಲ್ಪಿಸಿರುತ್ತದೆ. ಡೈನೋಸಾರ್ ವಿಭಾಗವು ಹದಿಹರೆಯದ ಮಕ್ಕಳನ್ನು ಸೆಳೆಯುತ್ತದೆ. ವಿಮಾನ ಮತ್ತು ಆವಿ

ಇಂಜಿನ್‌ಗಳೇ ಅಲ್ಲದೆ, ಹಲವಾರು ಯಂತ್ರಗಳು ಕೆಲಸ ಮಾಡುವ ಬಗೆಯನ್ನು ಇಲ್ಲಿ ಪರಿಚಯಿಸಲಾಗಿದೆ. ಮರ ಮತ್ತು ಲೋಹದ ಉಪಯೋಗಗಳನ್ನು ತಿಳಿಯಬಹುದು.

ಮ್ಯೂಸಿಯಂನ ಒಳಹೊಕ್ಕಂತೆ ವಿಜ್ಞಾನದ ವಿವಿಧ ಮಾದರಿಗಳನ್ನು ಹೊಂದಿರುವ ಹಲವು ವಿಭಾಗಗಳಿರುವುದು ಗೋಚರವಾಗುತ್ತದೆ. ಇಲ್ಲಿನ ಡಿಸ್‌ಪ್ಲೇ ವೈಜ್ಞಾನಿಕ ವಸ್ತುಗಳನ್ನು ಹೇಗೆ ಬಳಸಬೇಕು ಎಂಬುದಕ್ಕೆ ಅಲ್ಲಲ್ಲೇ ಫಲಕಗಳನ್ನು ಅರೆಸಿಟ್ಟಿರುವುದರ ಮೂಲಕ ಆಕರ್ಷಕ. ಫನ್ ಸೈನ್ಸ್ ಗ್ಯಾಲರಿ ಶಬ್ದ, ದ್ಯುತಿ ಶಾಸ್ತ್ರ ಮತ್ತು ದ್ರವಗಳು ಕುರಿತಾದ ಪ್ರದರ್ಶನಗಳಿಂದ ಕೂಡಿದೆ. ಬಾಹ್ಯಾಕಾಶ ಗ್ಯಾಲರಿ ಬಾಹ್ಯಾಕಾಶ ಅನ್ವೇಷಣೆ ಕುರಿತಾದ ಇತಿಹಾಸವನ್ನು ಪರಿಚಯಿಸುತ್ತದೆ. 'ಬಯೋಟೆಕ್ನಾಲಜಿ ಹಾಲ್'ನ ಪ್ರದರ್ಶನ ವಸ್ತುಗಳು ಜೈವಿಕ ತಂತ್ರಜ್ಞಾನದ ಪ್ರಯೋಜನಗಳನ್ನು ಮನ ಮುಟ್ಟುವಂತೆ ಹೇಳಬಲ್ಲವು. ಮ್ಯೂಸಿಯಂ ಮುಂದಿನ ಆವರಣದಲ್ಲಿ ರಾಕೆಟ್, ವಿಮಾನ, ರೈಲು ಇಂಜಿನ್ ಮೊದಲಾದವುಗಳ ಬೃಹತ್ ಆಕಾರಗಳನ್ನು ನಿಲ್ಲಿಸಲಾಗಿದೆ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ ಕಾಲದಲ್ಲಿ ಈ ವಸ್ತು ಸಂಗ್ರಹಾಲಯದ ಭೇಟಿ ತುಂಬಾ ಅವಶ್ಯಕವಾಗಿರುತ್ತದೆ. ಬಿ.ಇ.ಎಲ್. ಹಾಲ್ ಆಫ್ ಎಲೆಕ್ಟ್ರಾನಿಕ್ಸ್, ಮಿನಿ ಪ್ಲಾನಿಟೇರಿಯಂ (ತಾರಾಲಯ) ಅಥವಾ ತಾರಾಮಂಡಲ, 3ಡಿ ಚಿತ್ರಗಳು ಇಲ್ಲಿ ನೋಡಬೇಕಾದವು.

2007ರ ಏಪ್ರಿಲ್ 30 ರಿಂದ ಹೊಸ ಗ್ಯಾಲರಿ 'ಸೈನ್ಸ್ ಫಾರ್ ಚಿಲ್ಡ್ರನ್' ತೆರೆದಿದ್ದು ಸಂದರ್ಶಕರು ಸಂಭ್ರಮಿಸಬಹುದಾಗಿದೆ. ಈ ಗ್ಯಾಲರಿಯಲ್ಲಿ ಒಂದು ದೈತ್ಯ ಪಿಯಾನೊ ಇಡಲಾಗಿ ಅದರ ಮೇಲೆ ಮಕ್ಕಳು ಸಂಗೀತ ನುಡಿಸಲು ನೃತ್ಯ ಮಾಡಬಹುದು. 1903ರಲ್ಲಿ ರೈಟ್ ಸಹೋದರರು ಬಳಸಿದ ಫ್ಲೈಯರ್‌ನ ಪೂರ್ಣ ಪ್ರಮಾಣದ ಫ್ಯಾಸಿಮಿಲೆ ಇಲ್ಲಿ ಅತ್ಯಂತ ಸ್ವಾರಸ್ಯಕರ ಪ್ರದರ್ಶಿತವಸ್ತು. ಅಮೆರಿಕದ ಸ್ಮಿತ್ ಸೋನಿಯನ್ಸ್ ಸಂಸ್ಥೆ ಬಿಟ್ಟರೆ ಇದನ್ನು ಕಾಣಬಹುದಾದುದು ಇಲ್ಲೆ. ವಿಶ್ವದಲ್ಲೇ ಇದು ಗಮನಾರ್ಹ. ವಸ್ತು ಸಂಗ್ರಹಾಲಯಗಳ'ನ್ನು ಸೋಮವಾರಗಳು, ದಸರಾ ಮತ್ತು ದೀಪಾವಳಿ ಹಬ್ಬದ ದಿನ ಹೊರತುಪಡಿಸಿ ವರ್ಷದ ಉಳಿದೆಲ್ಲಾ ದಿನಗಳಲ್ಲೂ ಬೆಳಗ್ಗೆ 10 ರಿಂದ 6 ರವರೆಗೆ ತೆರೆಯಲಾಗುತ್ತದೆ. ಈ ವಸ್ತುಸಂಗ್ರಹಾಲದಲ್ಲಿರುವ ವಿಜ್ಞಾನದ ವಿಡಿಯೋಗಳೆಂದರೆ; ಮಕ್ಕಳಿಗಾಗಿ ವಿಜ್ಞಾನ: ಒಂದೊಂದೇ ಹೆಜ್ಜೆ ವಿಜ್ಞಾನ ಕಲಿಕೆ ಧ್ವನಿಯನ್ನು ಕೇಳುವಿಕೆ, ದೃಷ್ಟಿ ವಿಜ್ಞಾನ. ವಿನೋದ ವಿಜ್ಞಾನ: ಗಾಳಿಯೊಂದಿಗೆ ಆಟ, ದೃಷ್ಟಿ ಮತ್ತು ದೃಷ್ಟಿ ಭ್ರಾಂತಿ, ಚಲನೆ, ಗಣಿತ ವಿನೋದ, ಇಲೆಕ್ಟ್ರಾನಿಕ್ ಕಥೆ: ಕಂಪ್ಯೂಟರ್ ಹೇಗೆ ಕೆಲಸ ಮಾಡುತ್ತದೆ? ವಿಮಾನಯಾನ ಕಥೆ ಮತ್ತು ಸಮಾಜಕ್ಕಾಗಿ ಉಪಗ್ರಹಗಳು. ಹೀಗೆ ಈ ವಸ್ತುಸಂಗ್ರಹಾಲಯವು ಹೆಚ್ಚು ಜನರಿಗೆ ಮತ್ತು ಅದರಲ್ಲೂ ಪ್ರಮುಖವಾಗಿ ಮಕ್ಕಳಿಗೆ ಹೆಚ್ಚು ಆಕರ್ಷಣೀಯವೇ ಆಗಿರುವಂತಹ ಸ್ಥಳವಾಗಿದೆ ಎಂದೇ ಹೇಳಬಹುದು.

**ಎಚ್‌ಎಎಲ್ ಹೆರಿಟೇಜ್ ಸೆಂಟರ್ ಮತ್ತು ಏರೋಸ್ಪೇಸ್ ಮ್ಯೂಸಿಯಂ** ಕೂಡ ಬೆಂಗಳೂರು ನಗರದಲ್ಲಿರುವ ವಸ್ತುಸಂಗ್ರಹಾಲಯಗಳಲ್ಲಿ ಒಂದಾಗಿದೆ. ಇದು ವರ್ತೂರು ರಸ್ತೆಯಲ್ಲಿರುವ ಒಂದು ಅಪರೂಪದ ವಸ್ತುಸಂಗ್ರಹಾಲಯವೇ ಆಗಿರುತ್ತದೆ ಎಂದು ಹೇಳಬಹುದು. ಇದು ಹಿಂದೂಸ್ತಾನ ವಿಮಾನ

ಕಾರ್ಖಾನೆ ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಸ್ಥಾಪನೆಗೊಂಡಿತ್ತು. ಈ ಕಾರ್ಖಾನೆಯ ಅರವತ್ತು ವರ್ಷಗಳಿಗೂ ಹೆಚ್ಚಿನ ಇತಿಹಾಸವನ್ನು ಈ ಮ್ಯೂಸಿಯಂ ಜನಸಾಮಾನ್ಯರಿಗೆ ತಿಳಿಸಿಕೊಡುತ್ತಿದೆ. 2001ರಲ್ಲಿ ಪ್ರಾರಂಭಗೊಂಡ ಈ ಮ್ಯೂಸಿಯಂ ಬೆಂಗಳೂರು ನಗರದ ಬೆಳವಣಿಗೆಗೆ ಅದ್ಭುತವಾದ ಕೊಡುಗೆಯನ್ನು ನೀಡಿರುವ ವಿಮಾನ ಕಾರ್ಖಾನೆಯ ಚರಿತ್ರೆಯನ್ನು ಸುಲಭದಲ್ಲಿ ತಿಳಿಸಿಕೊಡುತ್ತದೆ. ಭಾರತದಲ್ಲಿ ವಿಮಾನಯಾನ ಚರಿತ್ರೆಯನ್ನೂ ಇಲ್ಲಿ ತಿಳಿಯಬಹುದು. ಎಚ್.ಎ.ಎಲ್. ಕೇವಲ 60 ವರ್ಷಗಳಲ್ಲಿ ಪ್ರಗತಿ ಸಾಧಿಸಿದ ದೇಶಗಳಿಗೆ ಸರಿಸಮನಾಗಿ ವೈಮಾನಿಕ ಕ್ಷೇತ್ರದಲ್ಲಿ ಸಾಧಿಸಿದ ದೇಶಗಳಿಗೆ ಸರಿಸಮನಾಗಿ ವೈಮಾನಿಕ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯ ಸ್ಥೂಲನೋಟ ಇಲ್ಲಿ ಲಭ್ಯ.

ಮ್ಯೂಸಿಯಂ ಕಟ್ಟಡ ಪ್ರವೇಶದ್ವಾರದಲ್ಲಿ ಗಗನಯಾನದ ಸಂಪೂರ್ಣ ಇತಿಹಾಸವನ್ನು ಚಿತ್ರಗಳೊಂದಿಗೆ ಫಲಕಗಳ ಮೇಲೆ ತಿಳಿಸಲಾಗಿದೆ. ಮನುಷ್ಯ ಹಾರಾಡಲು ನಡೆಸಿದ ಪ್ರಥಮ ಪ್ರಯತ್ನದಿಂದ ಹಿಡಿದು ಅತ್ಯಂತ ಆಧುನಿಕ ವಿಮಾನಗಳನ್ನು ಕೂಡ ತಯಾರಿಸುವವರೆಗೂ ನಡೆಸಿದ ಸಾಹಸಗಳ ಚಿತ್ರಣ ಇಲ್ಲಿರುತ್ತದೆ. ವಿವಿಧ ಶ್ಥತಮಾನಗಳಲ್ಲಿ ಉಂಟಾದ ಬೆಳವಣಿಗೆಯನ್ನು ಚಿತ್ರಗಳ ಸಮೇತ ಇಲ್ಲಿ ಕೊಡಲಾಗಿದೆ. 1940 ರಿಂದ ಸರಿಸುಮಾರು ಎರಡು ದಶಕಗಳ ಕಾಲ ಎಚ್.ಎ.ಎಲ್. ಹೊರ ದೇಶದ ವಿಮಾನಗಳನ್ನು ದುರಸ್ತಿ ಮಾಡುತ್ತಿರುದ್ದುದನ್ನು ಇಲ್ಲಿ ಕಾಣುತ್ತೇವೆ. ಯುದ್ಧ ವಿಮಾನಗಳು ಬಾಂಬ್, ಕ್ಷಿಪಣಿಗಳಂತಹ ಅಸ್ತ್ರಗಳನ್ನು ಎತ್ತಿಕೊಂಡು ಹಾರಲು ಹೇಗೆ ಸುಸಜ್ಜಿತವಾಗಿವೆ ಎಂಬುದನ್ನು ಚಿತ್ರಗಳ ಮೂಲಕ ತಿಳಿಯಬಹುದು. 1950ರಲ್ಲಿ ಎಚ್.ಎ.ಎಲ್. ತಯಾರಿಸಿದ ಬಸ್‌ನ ಚಿತ್ರವೂ ಇಲ್ಲಿರುತ್ತದೆ. ಇಂಗ್ಲೆಂಡ್‌ನಲ್ಲಿ ತಯಾರಾದ ಹೆಲಿಕಾಪ್ಟರ್ ಮತ್ತು ವಿಮಾನಗಳು, ಕಿರಣ್ ವಿಮಾನ ಮೊದಲಾದವುಗಳನ್ನು ಇಲ್ಲಿ ಕಾಣಬಹುದು.

**ಕೆಂಪೇಗೌಡ ವಸ್ತು ಸಂಗ್ರಹಾಲಯವನ್ನು** ಬೆಂಗಳೂರು ಮಹಾನಗರ ಪಾಲಿಕೆಯೇ ಕಾಳಜಿ ವಹಿಸಿ ಬೆಂಗಳೂರಿನ ಮೇಯೋಹಾಲ್‌ನಲ್ಲಿ ಸ್ಥಾಪಿಸಿರುವ ಮ್ಯೂಸಿಯಂ. ಇಲ್ಲಿ ಕೆಂಪೇಗೌಡರಿಗೆ ಸಂಬಂಧಿಸಿದ ವಿವರಗಳು, ವಸ್ತುಗಳು, ಸ್ಮಾರಕಗಳ ಮಾದರಿ ಎಲ್ಲವನ್ನು ಸಂಗ್ರಹಿಸಿ ಇಡುವ ಗುರಿ ಇದೆ. ಲಭ್ಯವಿರುವವುಗಳನ್ನು ಒಪ್ಪವಾಗಿ ಜೋಡಿಸಿಡಲಾಗಿದೆ. ಕೆಂಪೇಗೌಡ ಬೆಂಗಳೂರು ಕಟ್ಟಿದ ಒಬ್ಬ ಮಹಾನ್ ಸಾಹಸಿ ವ್ಯಕ್ತಿತ್ವ. ಕೆಂಪೇಗೌಡ ಗೋಪುರ ಎಂದು ಬೆಂಗಳೂರಿನಲ್ಲಿ ನಾಲ್ಕು ಗೋಪುರಗಳಿವೆ. ಮೇಖ್ರಿ ವೃತ್ತದ ಬಳಿ ಉತ್ತರದ ಗಡಿಗೋಪುರವಿದೆ. ಇದರ ಪರಿಸರವನ್ನು ಒಂದು ಸುಂದರ ಉದ್ಯಾನವಾಗಿ ಪರಿವರ್ತಿಸಲಾಗಿದೆ. ಲಾಲ್‌ಬಾಗ್‌ನ ಶಿಲಾಬೆಟ್ಟದ ಮೇಲೊಂದು ಗಡಿ ಗೋಪುರವಿದೆ. ಇದು ಪೂರ್ವ ಗಡಿ ಗೋಪುರ. ಕೆಂಪಾಂಬುಧಿ ಕೆರೆ ಬಳಿ ಪಶ್ಚಿಮ ಗಡಿ ಗೋಪುರ ಇದೆ. ಕೆಂಪೇಗೌಡನ ಹೆಸರಿನಲ್ಲಿ ಕೆಂಪೇಗೌಡ ರಸ್ತೆ, ಕೆಂಪೇಗೌಡ ಬಸ್ ನಿಲ್ದಾಣ, ಕೆಂಪೇಗೌಡನಗರ ಇವು ನಿರ್ಮಾಣವಾಗಿವೆ. ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡನ ಹೆಸರನ್ನಿಡಲು ಪ್ರಯತ್ನ ನಡೆದಿದೆ. ಇದು ಕೂಡ

ಒಂದು ವಸ್ತುಸಂಗ್ರಹಾಲಯವಾಗಿಯೇ ಪ್ರಸಿದ್ಧಿಯನ್ನು ಪಡೆದುಕೊಂಡಿರುತ್ತದೆ ಎಂದು ಪ್ರಸ್ತುತ ಅಧ್ಯಯನದ ಮೂಲಕ ಗುರುತಿಸಲಾಗಿದೆ.

**ಕರ್ನಾಟಕ ಚಿತ್ರಕಲಾ ಪರಿಷತ್ತು** ಬೆಂಗಳೂರಿನ ಕುಮಾರ್ ಅಪಾರ್ಕ್ ಬಡಾವಣೆಯಲ್ಲಿ ಕುಮಾರ ಕೃಪಾ ಅತಿಥಿ ಗೃಹಕ್ಕೆ ಹೋಗುವ ದಾರಿಯಲ್ಲಿ ನೆಲೆಗೊಂಡಿದೆ. ಈ ಸಂಸ್ಥೆಯು ಕಲಾವಿದರ ಸರ್ವಾಂಗೀಣ ಉನ್ನತಿಗೆ ಕಾರಣವಾಗುವ ಉದ್ದೇಶ ಇಟ್ಟುಕೊಂಡಿದೆ. ಇಂದಿನ ಮತ್ತು ಹಿಂದಿನ ಹೆಸರಾಂತ ಚಿತ್ರಕಲಾವಿದರ ಚಿತ್ರಗಳ ಪ್ರದರ್ಶನಕ್ಕೆ ಶಾಶ್ವತ ಕಲಾ ಗ್ಯಾಲರಿಗಳನ್ನು ಪ್ರೋತ್ಸಾಹಿಸುವುದೂ ಈ ಸಂಸ್ಥೆಯ ಪ್ರಧಾನ ಗುರಿಯಾಗಿದೆ. ರಷ್ಯಾದಿಂದ ಬಂದು ಕರ್ನಾಟಕದಲ್ಲಿ ನೆಲೆಸಿದ್ದ ಪ್ರಸಿದ್ಧ ಕಲಾವಿದ ಸ್ವೆತಾಸ್ಲಾವ್ ರೋರಿಕ್ ಅವರ 17 ಚಿತ್ರಕಲಾ ಕೃತಿಗಳನ್ನು ಪರಿಷತ್ತಿನಲ್ಲಿ ಶಾಶ್ವತವಾಗಿ ಪ್ರದರ್ಶಿಸಲಾಗಿದೆ. ಹಿಮಾಲಯದ ಸಮೃದ್ಧ ಸೌಂದರ್ಯವನ್ನು ಶ್ರೀಮಂತ ವರ್ಣಗಳಲ್ಲಿ ಅಭಿವ್ಯಕ್ತಿಸಿರುವ ರೋರಿಕ್‌ರ ಇಲ್ಲಿನ ಚಿತ್ರಗಳ್ಲಲಿ ಮಾನವರು ಹಾಗೂ ಪ್ರಾಣಿಗಳನ್ನು ಕಾಣಬಹುದು. ರೋರಿಕ್ ಹಿಮಾಲವ್ಯವನ್ನೇ ಮನೆಯಾಗಿ ಮಾಡಿಕೊಂಡಿದ್ದವರು. ಅಲ್ಲಿನ ಭೂದೃಶ್ಯಗಳನ್ನು ಕುಂಚದಲ್ಲಿ ಸೆರೆಹಿಡಿದರು. ಇವರ ಕಲಾಕೃತಿಗಳು ನಯನ ಮನೋಹರ.

ಚಿತ್ರಕಲಾ ಪರಿಷತ್ತಿನ ಎರಡನೇ ಮಹಡಿಯಲ್ಲಿ ರೋರಿಕ್ ಗ್ಯಾಲರಿ ಇದೆ. ಮಹಾನ್ ಕಲಾವಿದ ನಿಕೋಲಸ್ ರೋರಿಕ್ ರಚಿಸಿರುವ ಅದ್ಭುತ ಕಲಾಕೃತಿಗಳು ಈ ಗ್ಯಾಲರಿಯಲ್ಲಿವೆ. ಇವರ ಪುತ್ರ ಸ್ವೆತೋಸ್ಲಾವ್ ರೊರಿಕ್ ಇವರ್ ಅಚಿತ್ರಗಳಲ್ಲಿ ತಂತ್ರ ಕೌಶಲ್ಯ, ಬೌದ್ಧಿಕ ಪ್ರೇರಣೆ, ಸೃಜನಾತ್ಮಕ ಕಲ್ಪನೆ, ಆಧ್ಯಾತ್ಮಿಕ ಅಂತರದೃಷ್ಟಿಗಳು ಹದವಾಗಿ ಬೆಸೆದುಕೊಂಡಿವೆ. ರೋರಿಕ್ ಗ್ಯಾಲರಿಯಲ್ಲಿ ಹಿಮಾಲದ ವೈವಿಧ್ಯಮಯ ಚಿತ್ರಗಳಿವೆ. ಇಲ್ಲಿ ಹರಿಕಿಶೋರ ಕ್ರೇಜಿವಾಲ್ ಅವರು ಸಂಗ್ರಹಿಸಿದ ಭಾರತದ ಪ್ರಸಿದ್ಧ ಚಿತ್ರಕಲಾವಿದರ ಚಿತ್ರಕಲಾ ಸಂಗ್ರಹವನ್ನು ಮತ್ತು ಶಿಲ್ಪಗಳನ್ನು ಸಂಗ್ರಹಿಸಿಡಲಾಗಿದೆ. ಇವು ಪರಿಷತ್ತಿನ ಎಚ್.ಕೆ.ಕ್ರೇಜಿವಾಲಾ ಶಾಶ್ವತ ಗ್ಯಾಲರಿಯಲ್ಲಿ ಪ್ರದರ್ಶನ್ನಕ್ಕಿಡಲಾಗಿದೆ. ಇದಲ್ಲದೆ ಗ್ರಾಫಿಕ್ ಕಲಾವಿದ ಕೃಷ್ಣಾರೆಡ್ಡಿ (ನ್ಯೂಯಾರ್ಕ್) ಅವರ ಗ್ರಾಫಿಕ್ ಚಿತ್ರಗಳೂ ಎಸ್.ಎನ್.ಕುಕ್ಕೆಯವರ ಕಲಾಕೃತಿಗಳು ಇಲ್ಲಿ ಪ್ರದರ್ಶಿತವಾಗಿವೆ. ಮೈಸೂರು ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳ ಗ್ಯಾಲರಿಯನ್ನೂ ಸ್ಥಾಪಿಸಲಾಗಿದೆ. ಮೈಸೂರಿನ ಸಾಂಪ್ರದಾಯಿಕ ಚಿತ್ರಕಲೆಯ ಕೃತಿಗಳನ್ನು ಪ್ರಸಿದ್ಧ ಕಲಾವಿದ ವೈ.ಸುಬ್ರಹ್ಮಣ್ಯರಾಜು ಅವರ ಮಾರ್ಗದರ್ಶನದಲ್ಲಿ ಪುನರುಜ್ಜೀವನಗೊಳಿಸಿ ಪ್ರದರ್ಶನಕ್ಕೀಡಲಾಗಿದೆ. ಹಿಂದೆ ಪ್ರಚಲಿತವಿದ್ದ ತೊಗಲು ಗೊಂಬೆಗಳು, ಶಿಲ್ಪಕಲಾ ಪ್ರದರ್ಶನ ಇತರ ವಿಶೇಷಗಳು. ತರುಣ ಕಲಾವಿದರಿಂದ ಹಿರಿಯ ಕಲಾವಿದರವರೆಗೆ ಎಲ್ಲರನ್ನೂ ಪ್ರೋತ್ಸಾಹಿಸಲು ಅವರ ಕಲಾ ಪ್ರದರ್ಶನಕ್ಕೆ ಅನುವು ಮಾಡಿಕೊಡಲು ಇಲ್ಲಿ ಐದು ಗ್ಯಾಲರಿಗಳನ್ನು ಮೀಸಲಿರಿಸಲಾಗಿದೆ. ಹೀಗಾಗಿ ಶಾಶ್ವತ ಗ್ಯಾಲರಿಗಳನ್ನು ನೋಡಬರುವವರಿಗೆ ಒಬ್ಬರಲ್ಲ ಒಬ್ಬರು ಕಲಾವಿದರ ಚಿತ್ರಗಳ ಬಗೆಗೆ ಪ್ರದರ್ಶನ ನೋಡಲು ಸಾಧ್ಯವಾಗುತ್ತಿದೆ. ಪರಿಷತ್ತಿನ ಖಾಯಂ ಪ್ರದರ್ಶನ ಗ್ಯಾಲರಿಯಲ್ಲಿ ಭಾರತದ ಪ್ರಸಿದ್ಧ

ಚಿತ್ರಕಲಾವಿದರ ಖ್ಯಾತಿವೆತ್ತ ಚಿತ್ರಗಳು ಪ್ರದರ್ಶಿತವಾಗಿವೆ. ಚಿತ್ರಕಲಾ ಪರಿಷತ್ತಿನ ಗ್ಯಾಲರಿಗಳು ವಿಶ್ವದರ್ಜೆಯ ಕಲಾ ಪ್ರದರ್ಶನಗಳ್ನನು ಏರ್ಪಡಿಸಲೂ ಕೂಡ ಸೂಕ್ತ.

ಗಾಂಧೀ ಭವನ ವಸ್ತುಸಂಗ್ರಹಾಲಯವು ಮಹಾತ್ಮ ಗಾಂಧೀಜಿ ಅವರು ಭಾರತ ದೇಶದ ರಾಷ್ಟ್ರಪಿತ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಗಾಂಧೀಜಿ ಅವರ ಸಂಸ್ಮರಣೆಗಾಗಿಯೇ ಇಡೀ ಭಾರತದಾದ್ಯಂತ ಗಾಂಧೀ ಭವನ, ಗಾಂಧೀ ವಸ್ತುಸಂಗ್ರಹಾಲಯ, ಗಾಂಧಿ ಅಧ್ಯಯನ ಕೇಂದ್ರಗಳು, ಗಾಂಧೀಜಿ ಅವರ ಹೆಸರಿನಲ್ಲಿ ವಿಶ್ವವಿದ್ಯಾನಿಲಯಗಳು ಇನ್ನೂ ಮೊದಲಾದವುಗಳನ್ನು ಆಳುವ ಸರ್ಕಾರಗಳು ಕಾಲಾನುಕ್ರಮದಲ್ಲಿ ಸ್ಥಾಪಿಸಿರುತ್ತವೆ ಎಂದು ಹೇಳಬಹುದು. ಆ ಕಾರಣ ಮತ್ತು ಪರಿಣಾಮವಾಗಿಯೇ ಬೆಂಗಳೂರು ಮಹಾನಗರದ ಕುಮಾರಕೃಪಾ ರಸ್ತೆಯಲ್ಲಿ ಗಾಂಧೀ ಭವನವನ್ನು ಕೂಡ ಸ್ಥಾಪಿಸಲಾಗಿದೆ ಎಂಬುದನ್ನು ಈ ಮುಖೇನ ಗುರುತಿಸಬಹುದು. ಇಲ್ಲಿ ಬಹುಮುಖ್ಯವಾಗಿಯೇ ಗಾಂಧೀ ಸ್ಮಾರಕ ನಿಧಿ ಕೆಲಸ ಮಾಡುತ್ತಿದೆ. ಗಾಂಧೀಜಿ ಅವರ ತತ್ತ್ವ ದರ್ಶನ ಮತ್ತು ಅವರು ಜೀವಿತದ ಅವಧಿಯಲ್ಲಿ ನಡೆದಾಡಿ ಬೋಧನೆಗಳ ಪ್ರಚಾರ ಈ ಸ್ಮಾರಕ ನಿಧಿಯ ಬಹುಮುಖ್ಯ ಗುರಿಯೇ ಆಗಿರುತ್ತದೆ. ಈ ಗಾಂಧೀ ಭವನದಲ್ಲಿ ಒಂದು ವ್ಯವಸ್ಥಿತ ಪಿಕ್ಚರ್ ಗ್ಯಾಲರಿಯೂ ಕೂಡ ಇದೆ. ಇಲ್ಲಿ ಮಹಾತ್ಮ ಗಾಂಧೀ ಅವರ ಇಡೀ ಜೀವನವನ್ನು ಬಿಂಬಿಸುವ ಹಲವಾರು ಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿದೆ. ಗಾಂಧೀಜಿ ಅವರು ಬರೆದ ಕಾಗದಗಳ ಫೋಟೋಸ್ಟಾಟ್ ಪ್ರತಿಗಳನ್ನು ಸಂಗ್ರಹಿಸಿಟ್ಟಿರುವುದು ಕೂಡ ಇಲ್ಲಿನ ವಿಶೇಷವೇ ಆಗಿರುತ್ತದೆ. ಈ ಪತ್ರಗಳು ಗಾಂಧೀಜಿ ಅವರು ಹಲವಾರು ಪ್ರತಿಷ್ಠಿತ ಗಣ್ಯ ವ್ಯಕ್ತಿಗಳಿಗೆ ಬರೆದದಾಗಿದೆ. ಆದ್ದರಿಂದಲೇ ಈ ವಸ್ತುಸಂಗ್ರಹಾಲಯವೂ ಕೂಡ ಪ್ರಸಿದ್ಧಿಯನ್ನು ಪಡೆದುಕೊಂಡಿರುತ್ತದೆ.

**ಜವಾಹರಲಾಲ್ ನೆಹರೂ ತಾರಾಲಯವೂ** ಕೂಡ ಬೆಂಗಳೂರು ನಗರದಲ್ಲಿದೆ ಎಂದು ಗುರುತಿಸಬಹುದು. ಈ ವಸ್ತುಸಂಗ್ರಹಾಲಯವೂ ಬಹುಮುಖ್ಯವಾಗಿಯೇ ಖಗೋಳ ವಿಜ್ಞಾನವನ್ನು ಚೆನ್ನಾಗಿ ತಿಳಿಯಬೇಕೆಂದು ಆಶಿಸುವವರಿಗೆ ಪ್ಲಾನೆಟೇರಿಯಂ ಸೂಕ್ತ ಸ್ಥಳ. ಇದೊಂದು ಪ್ರದರ್ಶನಾಲಯವಾದರೂ ಇಲ್ಲಿ ಸಂಗ್ರಹಿಸಿಟ್ಟಿರುವ ಸುಂದರವಾದ ಚಿತ್ರಗಳು ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತ. ತಾರಾಲಯದ ಒಳಗೆ ಕಾಲಿಡುತ್ತಿರುವಂತೆಯೇ ಹಲವಾರು ಸುಂದರ ನೀಹಾರಿಕೆ ಅಥವಾ ನೆಬ್ಯುಲಾಗಳ ಚಿತ್ರಗಳನ್ನು ಕಾಣಬಹುದು. ನೀಹಾರಿಕೆ ಎಂದರೆ; ಮೇಘ ರೂಪದ ದೀಪ್ತ ತೆರೆ. ಇದು ಬ್ರಹ್ಮಾಂಡವಾಗಿರಬಹುದು. ಬ್ರಹ್ಮಾಂಡಗಳನ್ನು ನಕ್ಷತ್ರಗಳನ್ನು ರೂಪಿಸುವ ಬ್ರಹ್ಮದ್ರಾಶಿ ಆಗಿರಬಹುದು. ನಕ್ಷತ್ರಕ್ಕಿಂತ ಹೆಚ್ಚು ದೊಡ್ಡದಾಗಿಯೂ ಮಸಕಾಗಿಯೂ ಕಾಣುವ ಆಕಾಶಯಕಾಯ, ಅಲ್ಲಿ ಸಹ ಹೊಳೆಯುವ ಧೂಳು–ಅನಿಲ ಸಮುಚ್ಚಯ ನಕ್ಷತ್ರಗಳ ಜನ್ಮಸ್ಥಳ ಮತ್ತು ತೊಟ್ಟಿಲು ನೀಹಾರಿಕೆ. ಇಲ್ಲಿ ಆಕಾಶದಲ್ಲಿ ಮಿನುಗುವ ನಕ್ಷತ್ರಗಳೆಡೆಯಲ್ಲಿ ಬೆಳಕು ಸೂಸುವ ಧೂಳು ರಾಶಿಗಳಂಥ ಭಾಗಗಳನ್ನು ಕಾಣಬಹುದು. ಇದೇ ನೀಹಾರಿಕೆಗಳು, ನೀಹಾರಿಕೆಗಳೆಲ್ಲ ಒಟ್ಟಾಗಿ ಪ್ರದರ್ಶಿಸುವ ಬಣ್ಣಗಳ ಚಮಾತ್ಕರ

ಅಪೊಲೋ 17 ತೆಗೆದ ಅಭೂಮಿಯ ಸುಂದರ ಚಿತ್ರ. ಸುರುಳಿ ನಕ್ಷತ್ರ ಮಂಡಲ ಮೊದಲಾಗಿ ಸುಮಾರು ಇಪ್ಪತ್ತಕ್ಕೂ ಹೆಚ್ಚು ಚಿತ್ರಗಳನ್ನು ಕಾಣುತ್ತೇವೆ. ತಾರಾಲಯದ ಹೈಲೈಟ್ಸ್ ಸ್ಕೈ ಥಿಯೇಟರ್ ಗೋಳಾಕಾರ, ಒಂದು ಸ್ಥಲಕ್ಕೆ 225 ಜನ ಕುಳಿತುಕೊಳ್ಳಬಹುದು. ಮೇಲೆ ಆಕಾಶ ಇದೆ ಏನೋ ಎಂಬಂತಹ ಪರದೆ ಇದೆ. ಆ ಪರದೆಯ ಮೇಲೆ ನಕ್ಷತ್ರ ರಾಶಿಗಳ್ನನೊಳಗೊಂಡ ರಾತ್ರಿಯ ಆಕಾಶವನ್ನು ಮೂಡಿಸಲಾಗುತ್ತದೆ. ಆಗ ಪ್ರೇಕ್ಷಕರಿಗಾಗುವ ಸಂತೋಷ ಅಪಾರ. ಇದೊಂದು ನಲವತ್ತು ನಿಮಿಷಗಳ ಕಾರ್ಯಕ್ರಮ. ಇಂಗ್ಲೀಷ ಮತ್ತು ಕನ್ನಡ ಎರಡೂ ಬಾಷೆಗಳಲ್ಲೂ ವಿವರಣೆ ನೀಡಲಾಗುತ್ತದೆ.

**ಮತ್ಸ್ಯಾಲಯ (ಅಕ್ವೇರಿಯಂ)** ಮುಂಬಯಿಗೆ ಹೋಗಿ ತಾರಾಪೋರವಾಲಾ ಅಕ್ವೇರಿಯಂ ನೋಡಲಾಗದವರು ಬೆಂಗಳೂರಿನಲ್ಲೇ ಇರುವ ಸುಂದರ ಮತ್ಸ್ಯಾಲಯ ನೋಡಿ ಹರ್ಷಿಸಬಹುದು. ಈ ಮತ್ಸ್ಯಾಲಯ ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯದ ಸನಿಹದಲ್ಲಿ ಕಬ್ಬನ್ ಉದ್ಯಾನದ ಬಾಲಭವನದ ಬಳಿ ಇದೆ. ಇಂದು ಸ್ಥಿತಿವಂತರು ಮನೆಯಲ್ಲೇ ಪುಟ್ಟ ಅಕ್ವೇರಿಯಂ ಇಟ್ಟುಕೊಳ್ಳುವ ರೂಢಿ ಹೆಚ್ಚಾಗುತ್ತಿದೆ. ಈ ಮತ್ಸ್ಯಾಲಯದಲ್ಲಿ ಬಣ್ಣ ಬಣ್ಣದ ವಿವಿಧ ಪ್ರಭೇದಗಳ ಆಕರ್ಷಕ ಮೀನುಗಳನ್ನು ಸಂಗ್ರಹಿಸಿಡಲಾಗಿದೆ. ಮನೆಗಳಲ್ಲಿ ಅಲಂಕಾರಕ್ಕೆ ಸಾಕುವ ಹವ್ಯಾಸ ಉಳ್ಳದವರಿಗೆ ವಿವಿಧ ಬಣ್ಣದ ಮೀನುಗಳು, ಅವಕ್ಕೆ ಬೇಕಾದ ಆಹಾರ ಮತ್ತು ಸಾಕಲು ಬೇಕಾದ ವಿವಿಧ ಸಲಕರಣೆಗಳು ಇಲ್ಲಿ ಸುಲಭ ಬೆಲೆಗೆ ಲಭ್ಯ.

**ಶಾಶ್ವತಿ ವಸ್ತು ಸಂಗ್ರಹಾಲಯ** ಶಾಶ್ವತಿ ಮಹಿಳೆಯರಿಗಾಗಿ ಮಹಿಳೆಯರ ಕುರಿತೇ ಮಹಿಳೆಯರಿಂದಲೇ ರೂಪುಗೊಂಡ ಒಂದು ಅಪರೂಪದ ವಸ್ತು ಸಂಗ್ರಹಾಲಯ. ಜಯನಗರದ ನಾಗರತ್ನಮ್ಮ ಮೇಡಾ ಕಸ್ತೂರಿರಂಗ ಶೆಟ್ಟಿ ರಾಷ್ಟ್ರೀಯ ವಿದ್ಯಾಲಯ ಮಹಿಳಾ ಕಾಲೇಜಿನಲ್ಲಿ ಶಾಶ್ವತಿ ಸಂಗ್ರಹಾಲಯ ಸ್ಥಾಪಿಸಲಾಗಿದೆ. ಇದೊಂದು ಖಾಸಗಿ ವಸ್ತು ಸಂಗ್ರಹಾಲಯ. ಶಿಕ್ಷಣ ತಜ್ಞೆ, ಸಂಶೋಧಕಿ ಹಾಗೂ ಲೇಖಕಿಯಾಗಿದ್ದ ಚಿ.ನ.ಮಂಗಳಾ 1973ರಲ್ಲಿ ಕಾಲೇಜಿನ ಒಂದು ಸಣ್ಣ ಕೋಣೆಯಲ್ಲಿ ಪ್ರಾರಂಭಿಸಿದರು. ಮಹಿಳೆಗೆ ಸಂಬಂಧಿಸಿದ ಎಲ್ಲವನ್ನೂ ಸಂಗ್ರಹಿಸುವ ಯೋಜನೆಯೊಂದಿಗೆ ಮಂಗಳಾ ಅವರು ಆಗಿನ ಖ್ಯಾತ ಲೇಖಕಿಯರೊಂದಿಗೂ ಹಾಗೂ ತಮ್ಮ ವಿದ್ಯಾರ್ಥಿನಿಯರೊಂದಿಗೂ ಮೈಸೂರು, ಬೆಂಗಳೂರು ಮತ್ತಿತರ ಕಡೆಗಳಲ್ಲಿ ಪಾದಯಾತ್ರೆ ಮಾಡಿ ಸಾವಿರಾರು ಅಮೂಲ್ಯವಾದ ವಸ್ತುಗಳನ್ನು ಸಂಗ್ರಹಿಸಿದರು. ಮನೆಮನೆಗೂ ಹೋಗಿದ್ದು ಸಾಹಸವೇ. ಸಾವಿರಾರು ವಸ್ತುಗಳ ಸಂಗ್ರಹವಾಗಿದ್ದು, ಕಂಡ ಕಾಲೇಜಿನ ಆಡಳಿತ ಮಂಡಳಿ ಮ್ಯೂಸಿಯಂಗೆಂದೇ ಒಂದು ಕಟ್ಟಡವನ್ನು ನೀಡಿತು. ಮಂಗಳಾ ಅವರೂ ತಮ್ಮಲ್ಲಿದ್ದ ಅಪೂರ್ವವಾದ ವಸ್ತುಗಳನ್ನು ಕೊಡುಗೆಯಾಗಿ ನೀಡಿದರು.

ಶಾಶ್ವತಿ ವಸ್ತುಸಂಗ್ರಹಾಲಯವೂ ದೇಶದಲ್ಲೇ ಪ್ರಥಮ. 1982ರಲ್ಲಿ ಉದ್ಘಾಟನೆಗೊಂಡ ನೂತನ ಕಟ್ಟಡದಲ್ಲಿ ಎಲ್ಲಾ ವಸ್ತುಗಳು, ಖ್ಯಾತ ಲೇಖಕಿಯರ ಭಾವಚಿತ್ರಗಳು, ಮಹಿಳೆಯರಿಂದ ಮಹಿಳೆಯರಿಗಾಗಿಯೇ ವಿವಿಧ ಕ್ಷೇತ್ರಗಳಲ್ಲಿ ರಚಿತವಾದ ನಾಲ್ಕು ಸಾವಿರಕ್ಕೂ ಹೆಚ್ಚು ಪುಸ್ತಕಗಳು ಇವೆ. ಮಹಿಳಾ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಗಾಗಿ ಹಲವು ಸಂಶೋಧಕಿಯರು ಇಲ್ಲಿಗೆ ಬರುತ್ತಾರೆ.

ಒನಕೆ, ವಿಧವಿಧ ಒರಳು, ಶಾವಿಗೆ ಮಣೆ, ಮಣಿಸರಗಳು, ತೋರಣಗಳು, ಬಗೆಬಗೆಯ ಕಸೂತಿ, ಉಡುಪುಗಳು, ಕಲಾಕೃತಿಗಳು, ಶಿಲ್ಪಗಳು, ವಾದ್ಯಗಳು, ಅಡಿಕೆ ಕತ್ತರಿಗಳು ವಿಭಿನ್ನ ಆಭಾರಣಗಳು, ಮುನ್ನೂರು ವರ್ಷಗಳಿಗೂ ಹಿಂದೆ ಮರದಲ್ಲಿ ಕೆತ್ತಿದ ಸುಂದರ ಕಲಾಕೃತಿ 'ಕಾಮಧೇನು', ಧ್ವನಿಮುದ್ರಿಕೆಗಳು, ಹಸ್ತಪ್ರತಿಗಳು ಮೊದಲಾಗಿ ಅನೇಕ ವಸ್ತುಗಳು ಶಾಶ್ವತಿಯಲ್ಲಿ ಪ್ರದರ್ಶನಗೊಂಡಿವೆ.

**ಸರ್.ಸಿ.ವಿ.ರಾಮನ್ ವಸ್ತು ಸಂಗ್ರಹಾಲಯವು** ಸರ್ ಸಿ.ವಿ.ರಾಮನ್ ಅವರು ಭಾರತದ ಪ್ರಸಿದ್ಧ ಭೌತವಿಜ್ಞಾನಿಗಳೂ 1930ರಲ್ಲಿ ತಮ್ಮ ಶೋಧ 'ರಾಮನ್ ಪರಿಣಾಮ–ರಾಮನ್ ಗೆರೆಗಳು' ಇದಕ್ಕಾಗಿ ನೊಬೆಲ್ ಬಹುಮಾನ ಪಡೆದವರೂ ಆಗಿದ್ದರು. ಇವರು ಸ್ಥಾಪಿಸಿದ ಸಂಸ್ಥೆ ರಾಮನ್ಸ್ ಸಂಶೋಧನಾ ಸಂಸ್ಥೆ, ಸೃಷ್ಟಿಯ ಸಕಲ ವಿದ್ಯಮಾನಗಳೂ ರಾಮನ್ ಅವರ ಆಸಕ್ತಿಯನ್ನು ಕೆರಳಿಸಿದ್ದವು. ಸಂಶೋಧನಾ ಸಂಸ್ಥೆಯ ವಸ್ತು ಸಂಗ್ರಹಾಲಯವನ್ನು ಸ್ವತಃ ಅವರೇ ರೂಪಿಸಿದರು. ರಾಮನ್ ವಸ್ತು ಸಂಗ್ರಹಾಲಯ ಇಡೀ ಜಗತ್ತಿನ ಏಕೈಕ ಒಬ್ಬರೇ ವ್ಯಕ್ತಿ ಸ್ಥಾಪಿಸಿದ ವಿಶಿಷ್ಟ ವಸ್ತು ಸಂಗ್ರಹಾಲಯ. ಇಲ್ಲಿ ಸಂಗ್ರಹಿಸಿಡಲಾಗಿರುವ ವಜ್ರಗಳು, ಭೂಶಿಲೆಗಳು ಮೊದಲಾದ ಎಲ್ಲವೂ ಅಧ್ಯಯನ ವಸ್ತುಗಳಾಗಿವೆ. ಏಕವ್ಯಕ್ತಿ ವಸ್ತು ಸಂಗ್ರಹಾಲಯಗಳು ಇನ್ನು ಕೆಲವಿರಬಹುದಾದರೂ ಅವು ಖಾಸಗಿ ವಸ್ತು ಸಂಗ್ರಹಾಲಯವಾಗಿಯೇ ಉಳಿದಿವೆ. ಸಾರ್ವಜನಿಕರಿಗೆ ತೆರೆದುಕೊಳ್ಳುವಂತಾದಾಗ ಬೆಳಕಿಗೆ ಬರುತ್ತವೆ. ಸಾಮಾನ್ಯವಾಗಿ ಕರ್ನಾಟಕದ ಪ್ರತಿ ವೈಜ್ಞಾನಿಕ ಸಂಶೋಧನಾ ಸಂಸ್ಥೆಯಲ್ಲೂ ಇಂತಹ ಸಂಗ್ರಹಾಲಯಗಳು ಇರುತ್ತವೆ ಎಂದೇ ಹೇಳಬಹುದು.

**ಮದ್ರಾಸ್ ಸೈನಿಕದಳ ವಸ್ತು ಸಂಗ್ರಹಾಲಯ ಮತ್ತು ಪ್ರಾಚೀನ ಪತ್ರಾಗಾರವು** ಸೇನೆಗೆ ಸಂಬಂಧಿಸಿದ ವಸ್ತುಗಳ ಸಂಗ್ರಹಿಸಿರುವ ವಿಶಿಷ್ಟ ಸಂಗ್ರಹಾಲಯ ಮದ್ರಾಸ್ ಸ್ಯಾಪರ್ಸ್ ಮ್ಯೂಸಿಯಂ, ಉದ್ಯಾನ ನಗರಿ ಬೆಂಗಳೂರಿನಲ್ಲಿ ಈ ಮ್ಯೂಸಿಯಂ 1979ರಲ್ಲಿ ಸ್ಥಾಪನೆಯಾಯಿತು. ಪ್ರಸ್ತುತ ಇಂದು ಸೇನಾ ಇತಿಹಾಸ ದಾಖಲೆಗಳು ಮತ್ತು ಸೇನಾ ತಂಡಗಳ ಚಾಲನೆಗೆ ಸೇನಾ ಇಂಜಿನಿಯರ್‌ಗಳ ಮಾನವಕೃತ ಉಪಕರಣಗಳನ್ನು ಹೊಂದಿರುತ್ತದೆ ಎಂಬುದನ್ನು ಗುರುತಿಸಬಹುದು.

**ಕನ್ನಡ ಭವನ ಕಲಾ ಗ್ಯಾಲರಿಯೂ ಕೂಡ** ಬೆಂಗಳೂರಿನ ಮಹಾನಗರದಲ್ಲಿನ ಜಯಚಾಮರಾಜೇಂದ್ರ (ಜೆ.ಸಿ.) ರಸ್ತೆಯಲ್ಲಿ ರವೀಂದ್ರ ಕಲಾಕ್ಷೇತ್ರದ ಪಕ್ಕದಲ್ಲಿನ ಕನ್ನಡ ಭವನ ಒಂದು ಸುಂದರ ಕಟ್ಟಡ. ಇಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಅಕಾಡೆಮಿಗಳು ಕೆಲಸ ಮಾಡುತ್ತವೆ. ಇಲ್ಲಿ ಚಿತ್ರ ಎಂಬ ಕಲಾ ಗ್ಯಾಲರಿ ಹಾಗೂ ಶಿಲ್ಪವನ ಎಂಬ ಕಲಾಕೃತಿಗಳ ಸಮುಚ್ಚಯವಿದೆ. ಕಲಾಗ್ಯಾಲರಿಯಲ್ಲಿ ನಾಡಿನ ಖ್ಯಾತ ಚಿತ್ರಕಲಾವಿದರ ಜಲವರ್ಣ, ತೈಲ ಮತ್ತಿತರ ಕಲಾಕೃತಿಗಳನ್ನು ಶಿಲ್ಪವನದಲ್ಲಿ ಕನ್ನಡನಾಡಿನ ವಿಖ್ಯಾತ ಶಿಲ್ಪಗಳ ಕಲಾಕೃತಿ ಅಳನ್ನು ಪ್ರದರ್ಶನಕ್ಕಿಡಲಾಗುವಲ್ಲಿ ಒಂದು ವಸ್ತು ಸಂಗ್ರಹಾಲಯವಾಗಿ ರೂಪುಗೊಂಡಿದೆ.

**ಹಸ್ತಪ್ರತಿಗಳ ಮ್ಯೂಸಿಯಂ** ಬಿ.ಎಂ.ಶ್ರೀ ಪ್ರತಿಷ್ಠಾನ ಬೆಂಗಳೂರಿನ ಒಂದು ಪ್ರತಿಷ್ಠಿತ ಸಂಸೆಯಾಗಿದ್ಧೆ.ಇದರ ಸ್ಥಾಪನೆಗೆ ಕಾರಣರಾದವರು ಕನ್ನಡದ ಪ್ರಸಿದ್ಧ ಕವಿ – ಸಾಹಿತಿ – ನಾಟಕಕಾರ ಎಂ.ವಿ.ಸೀತಾರಾಮಯ್ಯ. ಇವರು ಹಸ್ತ ಪ್ರತಿಗಳ ಅಧ್ಯಯನದಲ್ಲಿ ನಿಷ್ಣಾತರಿದ್ದರು. ಹಲವಾರು ಹಸ್ತಪ್ರತಿಗಳನ್ನು ಪರಾಮರ್ಶಿಸಿ ಗ್ರಂಥ ರೂಪಕ್ಕೆ ತಂದುಕೊಟ್ಟರು. ಹಸ್ತ ಪ್ರತಿಗಳು ತಾಳೆಗರಿಗಳ ಮೇಲೆ ಮೂಡಿದಂಥವು. ಇಂಥ ಹಲವು ಹತ್ತು ಹಸ್ತಪ್ರತಿಗಳನ್ನು ಹಾಳಾಗದ ರೀತಿಯಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನ ಕನ್ನಡ ಭವನದ ಮೊದಲ ಅಂತಸ್ತಿನ ಒಂದು ಕೋಣೆಯಲ್ಲಿ ಜೋಪಾನ ಮಾಡಿ ಸಂಗ್ರಹಿಸಿಡಲಾಗಿದೆ. ಹಸ್ತ ಪ್ರತಿ ಅಧ್ಯಯನ ಮಾಡುವವರಿಗೂ ಇದನ್ನು ನೋಡಲು ಒಂದು ಸದಾವಕಾಶ. ಪ್ರತಿಷ್ಠಾನ ದೊಡ್ಡ ಸಮ್ಮೇಳನಗಳಲ್ಲಿ ಸಾಹಿತ್ಯ ಸಮಾರಂಭಗಳಲ್ಲಿ ಹಲವು ಹಸ್ತ ಪ್ರತಿಗಳನ್ನು ಒಯ್ದು ಪ್ರದರ್ಶಿಸುವ ಕೆಲಸ ಮಾಡುತ್ತದೆ.ಇದರಿಂದ ಆಸಕ್ತರು ಅಮೂಲ್ಯ ಗ್ರಂಥಗಳ ಹಸ್ತಪ್ರತಿಗಳನ್ನು ನೋಡುವ ಭಾಗ್ಯ ಪಡೆಯುತ್ತದೆ.

ಹೀಗೆ, ಬೆಂಗಳೂರು ಮಹಾನಗರದಲ್ಲಿರುವ ಹಾಗೂ ಈ ಮೇಲೆ ಸ್ಥೂಲವಾಗಿ ಚರ್ಚಿಸಿರುವಂತಹ ಪ್ರಸಿದ್ಧ ವಸ್ತುಸಂಗ್ರಹಾಲಯಗಳು ದೇಶದ ಮತ್ತು ನಾಡಿನ ಪ್ರಾಚೀನತೆಯಿಂದ ಹಿಡಿದು ಸಮಕಾಲೀನ ಸಂದರ್ಭದವರೆವಿಗೂ ಇರುವ ಚರಿತ್ರೆಯ ಸಾಕ್ಷ್ಯಗಳನ್ನು ಸಾಕ್ಷೀಕರಿಸಿರುವಂತಹ ಸಂರಕ್ಷಣೆಯ ತಾಣಗಳೇ ಆಗಿರುತ್ತವೆ. ಇವುಗಳ ಸ್ಥಾಪನೆಯಿಂದಲೇ ಇಂದಿನ ತಲೆಮಾರಿಗೆ ಹಿಂದಿನ ಚರಿತ್ರೆಯ ಪುಟಗಳನ್ನು ಸಾಧ್ಯವಾಗಿರುತ್ತವೆ ಎಂದು ಹೇಳಬಹುದು.

## ಅಧ್ಯಯನಕ್ಕೆ ಬಳಸಿಕೊಂಡಿರುವಂತಹ ಆಯ್ದ ಗ್ರಂಥಸೂಚಿ


1. ಡಾ.ಸೂರ್ಯಕಾಂತ್ ಎಂ. ಕಾಮತ್, (ಸಂ), ಕರ್ನಾಟಕ ಗ್ಯಾಸೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು, 1981
2. ಪುರಾತತ್ತ್ವ ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆ, ಕೈಪಿಡಿ, ಕರ್ನಾಟಕ, 2013
3. ಅರುಣಿ.ಎಸ್.ಕೆ, ಪರಂಪರೆಯ ಗಟ್ಟಿಗಳು, ದಿ ಹಿಂದೂ, 3ನೇ ಡಿಸೆಂಬರ್, 2012
4. ಜನಪದ ಲೋಕ, 2013ನೇ ಏಪ್ರಿಲ್, 13
5. ಪ್ರಾದೇಶಿಕ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ, ಪರಿಸರ ಮತ್ತು ಅರಣ್ಯ ಸಚಿವಾಲಯ, ಭಾರತ ಸರ್ಕಾರ, 16ನೇ ಮಾರ್ಚ್, 2013